<u>ದಿನಾಂಕಃ **13-01-2021** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ 1, 2 ಮತ್ತು 4 ನೇ ಪ್ರತಿವಾದಿಯ ಪರವಾಗಿ ಶ್ರೀ ಎಚ್.ಆರ್.ಪಿ. ವಕೀಲರಿಂದಃ</u>**

ಈ ದಾವೆಯನ್ನು ಯಾವ ಪರಿಹಾರ ಕೋರಿ ಹಾಕಿರುತ್ತೀರಾ ಎಂದರೆ ಪ್ರತಿವಾದಿಯರು ನನಗೆ ಅಡಚಣೆ ಮಾಡಿದ್ದರಿಂದ ಮತ್ತು ನನಗೆ ಹೊಡೆಯಲು ಬಂದಿದ್ದರಿಂದ ಸಲ್ಲಿಸಿರುತ್ತೆನೆ. ಜಮಿನು ಸರ್ವೆ ನಂ. 201 ಒಟ್ಟು ಕ್ಷೇತ್ರ 32 ಎಕರೆ ಇರುತ್ತದೆ. ದಾವಾ ಜಮಿನನ್ನು ನನ್ನ ತಾತ ಖರೀದಿ ಮಾಡಿರುತ್ತಾರೆ. ಖರೀದಿ ಮಾಡಿರುತ್ತಾರೆ ಎಂದು ತೊರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಜಮಿನು ಸರ್ವೆ ನಂ.201 ರಲ್ಲಿ 18 ಹಿಸ್ಸಾಗಳು ಇರುತ್ತವೆ. ನಾನು ವಡಗೇರಾ ತಾಲೂಕಿನ ಕುರಕುಂದಿ ಗ್ರಾಮದಲ್ಲಿ ವಾಸವಾಗಿರುತ್ತೆನೆ ಎಂದರೆ ಕುರಕುಂದಾ ಮತ್ತು ಬೋಮ್ಮನಳ್ಳಿ ಗ್ರಾಮದಲ್ಲಿ ಇರುತ್ತೆನೆ. ಚುನಾವಣೆ ಸಮಯದಲ್ಲಿ ಮತವನ್ನು ಕುರಕುಂದಾ ಗ್ರಾಮದಲ್ಲಿ ಹಾಕುತ್ತೇನೆ ಎಂದರೆ ಸರಿ. ಪ್ರತಿವಾದಿಯರು ನನಗೆ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ. ಪ್ರತಿವಾದಿಯರು ದಾವಾ ಜಮಿನಿನಲ್ಲಿ ಸಜ್ಜೆ ಬೆಳೆಯನ್ನು ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಾತ ಮತ್ತು ಮುತ್ತಾತನ ಕಾಲದಿಂದ ದಾವಾ ಜಮಿನಿನ ಕಜ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಜಮಿನಿನ ಸ್ವಾಧೀನಕ್ಕೂ ಮತ್ತು ಕಂದಾಯ ದಾಖಲೆಗೂ ಹೊಂದಾಣಿಕೆ ಇರುವುದಿಲ್ಲ ಎಂದು ಡಿ.ಡಿ.ಎಲ್.ಆರ್. ಯಾದಗಿರಿ ರವರು ನ್ಯಾಯಾಲಯದಲ್ಲಿ ಪ್ರತಿವಾದಿಯರು ಅಪೀಲನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಆ ಅಪೀನ್ನು ನಾನು ನಮ್ಮ ನ್ಯಾಯವಾದಿಯರ ಮುಖಾಂತರ ಹಾಜರು ಆಗಿರುತ್ತೇನೆ ಎಂದರೆ ಸರಿ. ದಿಃ 4.12.2019 ರಂದು ಡಿ.ಡಿಎಲ್.ಆರ್. ಯಾದಗಿರಿ ರವರು ಫಾರ್ಮ 10 ಮತ್ತು ಪೋಡಿ ನಕ್ಷೆಗಳನ್ನು ರದ್ದು ಪಡಿಸಿ ಹೊಸ ದಾಖಲೆಗಳನ್ನು ತಯಾರಿಸಲು ಆದೇಶ ಮಾಡಿರುತ್ತಾರೆ ಎಂದರೆ ಸರಿ. ದಾವಾ ಜಮಿನು ನೈಜತ್ಯವಾಗಿ ಅಸ್ತಿತ್ವದಲ್ಲಿ ಇರುವದಿಲ್ಲ ಎಂದರೆ ಸರಿಯಲ್ಲ. ನಾನು ತೊರಿಸಿರುವ ಚಕಬಂದಿಯಲ್ಲಿ ಆ ತರಹದ ಯಾವುದೇ ಜಮಿನು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾನು ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ ತಾಂತ್ರಿಕ ದೋಶದಿಂದಾಗಿ ನನ್ನ ಹೆಸರು ಬಂದಿರುತ್ತದೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳ ತಪ್ಪು ದಾಖಲೆ ತಯಾರಿಸಿದ ಆಧಾರ ಮೇರೆಗೆ ದಾವಾ ಜಮಿನಿನ ಮಾಲಿಕ ಮತ್ತು ಕಜ್ಜೆದಾರನು ಇರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ನನಗೆ ಯಾವುದೇ ಕಾರಣ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಡಿ.ಡಿ.ಎಲ್.ಆರ್. ಯಾದಗಿರಿಯವರ ಆದೇಶದ ಪ್ರಕಾರ ತಹಶೀಲ್ದಾರ ರವರು ಜಮಿನು ಸರ್ವೆ ನಂ. 201 ರ ಹಿಸ್ಸಾಗಳು ರದ್ದುಗೊಳಿಸಿ ಜಮಿನನ್ನು ಒಟ್ಟುಗೊಳಿಸಲು ಆದೇಶ ಮಾಡಿರುತ್ತಾರೆ ಎಂದರೆ

ಸರಿಯಲ್ಲ. ಎಲ್ಲ ಹಿಸ್ಸಾಗಳು ಜಮಿನು ಒಂದೇ ಪಹಣಿ ಪತ್ರಿಕೆಗಳಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ನೈಜತ್ಯಯಲ್ಲಿ ದಾವಾ ಜಮಿನು ಅಸ್ತಿತ್ವದಲ್ಲಿ ಇರದೆ ಇದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರಧಾನ ಜೆಎಂಎಫ್‌ಸಿ ನ್ಯಾಯಾಧೀಶರು
ಶಹಾಪೂರ .